ಓ ಎಸ್ ನಂ. 16/2014

ಡಿ ಡಬ್ಲ್ಯೂ-1

ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣವಚನ ಬೋಧಿಸಲಾಯಿತು.

ದಿಃ 22.05.2023

ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆ ಎನ್ ಎಸ್ ವಾದಿ ಪರ ವಕೀಲರಿಂದ

ದಾವಾಸ್ತಿಯ ಐಟಂ ನಂಬರ್ 1 ರ ಪೈಕಿ 5 ಗುಂಟೆ ಜಮೀನು 1975-76 ನೇ ಸಾಲಿನಲ್ಲಿ ಹೇಮಾವತಿ ನಾಲೆಗೆ ಭೂಸ್ವಾಧೀನವಾಗಿದೆ ಎಂದರೆ ಸರಿ. ಸದರಿ ಭೂಸ್ವಾಧೀನದ ಪರಿಹಾರವನ್ನು ನನ್ನ ಗಂಡ ಪಡೆದುಕೊಂಡಿರುತ್ತಾರೆ. ಭೂಸ್ವಾಧೀನದ ಬಾಬ್ತು 268.95 ರೂಪಾಯಿ ಹಣವನ್ನು ವಾದಿಗೆ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪರಿಹಾರದ ಹಣವನ್ನು ದಾಖಲಾತಿಗಳ ಮೂಲಕ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳು ಯಾವ ದಾಖಲಾತಿಗಳು ಎಂದು ನನಗೆ ಗೊತ್ತಿಲ್ಲ. ಹಿಂದೆ ಸಿವಿಲ್ ವ್ಯಾಜ್ಯಗಳು ನಡೆದ ವಿಚಾರಗಳು ನನಗೆ ಹೇಳಲು ಬರುವುದಿಲ್ಲ. 1998 ನೇ ಸಾಲಿನಲ್ಲಿ ನನ್ನ ಗಂಡ ಮತ್ತು ಮಗ ಸಲ್ಲಿಸಿದ್ದ ದಾವೆಯ ಪ್ರಕಾರ ನಾನು ಪರಿಹಾರ ಹೊಂದಿಲ್ಲ. ವಾದಿಯರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ ಬಗ್ಗೆ ನಾನು ದೂರನ್ನು ನಾಡ ಕಛೇರಿಗೆ ನೀಡಿರುತ್ತೇನೆ. ದಾವಾಸ್ತಿಯ ಸ್ವಾಧೀನವನ್ನು ಕೋರಿ ವಾದಿಯ ವಿರುದ್ಧ ನಾನು ಎ ಸಿ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ.

ತಿಮ್ಮಮ್ಮ ಕೋಂ ಮರಿಯನಾಯಕ ಅವರು ಮಸೀದಿ ರೋಡ್ ನಲ್ಲಿ ಮೃತಪಟ್ಟಿರುತ್ತಾರೆ. ತಿಮ್ಮಮ್ಮ ಅವರು ಮೃತಪಡುವ ಪೂರ್ವದಲ್ಲಿ ಮಸೀದಿ ರೋಡ್ ನಲ್ಲಿರುವ ಮನೆಯಲ್ಲಿ ವಾಸವಿದ್ದರು. ಐಟಂ ನಂಬರ್ 2 ರ ಆಸ್ತಿಯಲ್ಲಿ ತಿಮ್ಮಮ್ಮ ಮತ್ತು ವಾದಿಯರು ವಾಸವಾಗಿದ್ದರು ಎಂದರೆ ಸರಿಯಲ್ಲ. ಐಟಂ ನಂಬರ್ 2 ರಲ್ಲಿರುವ ಮನೆ ಮತ್ತು ನಮ್ಮ ಮನೆ ಅಕ್ಕ-ಪಕ್ಕದಲ್ಲಿದೆ.

ಎಷ್ಟು ಗುಂಟೆ ಜಮೀನಿಗೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಾನು ಸ್ವಾಧೀನವಿರುವ ಮನೆಯ ಚೆಕ್ಕುಬಂದಿ ಹೇಳಲು ಗೊತ್ತಾಗುವುದಿಲ್ಲ. ದಾವಾಸ್ತಿಯ ಐಟಂ ನಂಬರ್ 1 ಮತ್ತು 2 ನ್ನು ಬಿಡಿಸಿಕೊಡುವಂತೆ ವಾದಿಯ ವಿರುದ್ಧ ದಾವೆ ಸಲ್ಲಿಸುವ 3 ತಿಂಗಳ ಮೊದಲು ಪೋಲೀಸ್ ಠಾಣೆಗೆ ದೂರು ನೀಡಿರುತ್ತೇನೆ ಎಂದರೆ ಸರಿ. ತದನಂತರ ವಾದಿಯರು ನಮ್ಮ ಆಸ್ತಿಗೆ ತಂಟೆ ತಕರಾರು ಮಾಡಬಾರದು ಎಂದು ತಿಳಿಸಿ ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ಪಂಚಾಯ್ತಿ ನಡೆದಿರುತ್ತದೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸುವ 3 ತಿಂಗಳ ಪೂರ್ವದಲ್ಲಿ ದಾವಾಸ್ತಿಯಲ್ಲಿ ವಾದಿಯರಿಗೆ ಹಕ್ಕು ಮತ್ತು ಸ್ವಾಧೀನವಿಲ್ಲ ಎಂದು ಅಲ್ಲಗಳೆದಿದ್ದೆ ಎಂದರೆ ಸರಿ. ವಾದಿಯ ಹಕ್ಕು ಮತ್ತು ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ವಾದಿಯರು ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಓ ಎಸ್ ನಂ. 16/2014

ಡಿ ಡಬ್ಲ್ಯೂ-1

ವಾದಿಯರ ಜಮೀನನ್ನು ಬಿಟ್ಟುಬಿಡುವಂತೆ ನನ್ನ ಮಕ್ಕಳು ತಿಳಿಸಿದರೂ ಸಹ ದಾವೆಯನ್ನು ನಾನು ಮುಂದುವರೆಸುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯ ಪಹಣಿಯು ಮೂರು ಜನರ ಹೆಸರಿನಲ್ಲಿ ಬರುತ್ತಿರುವುದರಿಂದ ನಾನು ದಾವಾಸ್ತಿಯ ಕಂದಾಯವನ್ನು ಪಾವತಿಸಿರುವುದಿಲ್ಲ, ನನ್ನ ಹೆಸರಿಗೆ ದಾವಾಸ್ತಿಯ ಪಹಣಿ ಬಂದ ನಂತರ ಕಂದಾಯ ಪಾವತಿ ಮಾಡುತ್ತೇನೆ.

ದಾವಾಸ್ತಿಯ ಪಹಣಿ ಪತ್ರಿಕೆಯು ನಂಜನಾಯಕ, ಮರಿಯಪ್ಪನಾಯಕ, ನಿಂಗಪ್ಪನಾಯಕ ಮೂರು ಜನರ ಹೆಸರಿನಲ್ಲಿ ಬರುತ್ತಿರುವ ಬಗ್ಗೆ ನಾನು ಎ ಸಿ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ. ನನಗೆ ದಾವಾಸ್ತಿಯ ಪಹಣಿ ಮೂರು ಜನರ ಹೆಸರಿನಲ್ಲಿ ಬರುತ್ತಿರುವ ಬಗ್ಗೆ 1998 ರಲ್ಲಿ ತಿಳಿದಿರುತ್ತದೆ. ಪಂಚಾಯತ್ ಪಾಲುಪಾರಿಕತ್ ನ ಪ್ರಕಾರ ದಾವಾಸ್ತಿ ನಿಂಗಪ್ಪನಾಯಕ ಅವರಿಗೆ ಸೇರಬೇಕಾದ ಜಮೀನು ಎಂದರೆ ಸರಿಯಲ್ಲ. ನಿಂಗಪ್ಪನಾಯಕ ಅವರ ಸ್ವಾಧೀನಕ್ಕೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ .

**(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ.ಹೇ.ಸ.ಇ.ಎ.ಒ.,

ಸಹಿ/-

**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.**
**ಚನ್ನರಾಯಪಟ್ಟಣ.**